**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಚೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ,ಸಂಪಿಗೆ ರಸ್ತೆ,ಬೆಂಗಳೂರು**

ಸಂ: ಪಪೂಶಿಇ/ಎಸ್.ಎ.ಟಿ.ಎಸ್/2021 ದಿನಾಂಕ:08-07-2021

**ಸುತ್ತೋಲೆ**

**ವಿಷಯ:** 2020-2021 ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪ್ರಥಮ ಪಿಯುಸಿ ಹಾಗೂ 10ನೇ ತರಗತಿಯ ಎಸ್‌ಎಟಿಎಸ್ ಪೋರ್ಟಲ್‌ನಲ್ಲಿ ಪರಿಶೀಲಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ ದಿನಾಂಕ: 07/06/2021

****

ಮೇಲಿನ ವಿಷಯ ಹಾಗೂ ಉಲ್ಲೇಖದನ್ವಯ, 2020-2021 ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪ್ರಥಮ ಪಿಯುಸಿ ಹಾಗೂ 10ನೇ ತರಗತಿಯ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಎಸ್ ಎ ಟಿಎಸ್ ತಂತ್ರಾಂಶದಲ್ಲಿ ನಮೂದಿಸಲು ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.

ಈ ಸಂಬಂಧ 2020-2021ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪ್ರಥಮ ಪಿಯುಸಿ ಹಾಗೂ 10ನೇ ತರಗತಿಯ ವಿಷಯವಾರು ಅಂಕಗಳನ್ನು ವೀಕ್ಷಿಸಲು, ಇಲಾಖೆಯು sts.karantaka.gov.in ನಲ್ಲಿ ಅವಕಾಶ ಕಲ್ಪಿಸಿದೆ. ವಿದ್ಯಾರ್ಥಿಗಳು ತಮ್ಮ SATS Number, Enrollment Number ಅಥವಾ Student Number ಬಳಸಿ ವಿದ್ಯಾರ್ಥಿಗಳ ಅಂಕಗಳನ್ನು ಪರಿಶೀಲಿಸಬಹುದು.

ಒಂದುವೇಳೆ ಸದರಿ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ ವಿದ್ಯಾರ್ಥಿಯು ಆಯಾ ಕಾಲೇಜಿನ ಪ್ರಾಚಾರ್ಯರನ್ನು ಸಂಪರ್ಕಿಸಿ ಸರಿಪಡಿಸಿಕೊಳ್ಳಬಹುದಾಗಿದೆ.

**ಅಂಕಗಳ** ವ್ಯತ್ಯಾಸವನ್ನು **ಸರಿಪಡಿಸುವ** ಕ್ರಮ:

- ತಿದ್ದುಪಡಿಗೆ ಕೋರಿದ ವಿದ್ಯಾರ್ಥಿಯ ಕಾಲೇಜಿನ ಪ್ರಾಚಾರ್ಯರು ದಾಖಲೆಗಳನ್ನು ಪರಿಶೀಲಿಸಿ ವಿವರಗಳೊಂದಿಗೆ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರಿಗೆ ವರದಿ ಮಾಡುವುದು.
- ಜಿಲ್ಲಾ ಉಪನಿರ್ದೇಶಕರು ಪುನಃ ಪರಿಶೀಲಿಸಿ ತಮ್ಮ ಲಾಗಿನ್‌ನಲ್ಲಿ ಈ ಹಿಂದೆ ತಿಳಿಸಿದಂತೆ ತಿದ್ದುಪಡಿ ಮಾಡಿ APPROVE ಮಾಡುವುದು.

....2

- ಮೇಲಿನ ಕಾರ್ಯವನ್ನು ದಿನಾಂಕ: 12/07/2021 ವರೆಗೆ ಕಾಯದೆ, ಮನವಿ ಸ್ವೀಕೃತವಾದ ಕೂಡಲೇ ಕ್ರಮ ಜರುಗಿಸುವುದು.
- ವಿದ್ಯಾರ್ಥಿಗಳಿಗೆ ಮೇಲಿನಂತೆ ವೀಕ್ಷಣೆಗೆ ಅವಕಾಶವನ್ನು ದಿನಾಂಕ: 08/07/2021 ರಿಂದ 10/07/2021 ಮಾತ್ರ ಕಲ್ಪಿಸಿರುತ್ತದೆ.
- ಲಿಂಕ್ ನಿಷ್ಕ್ರಿಯಗೊಳಿಸಿದ ನಂತರ ಯಾವುದೇ ಮನವಿಯನ್ನು ಸ್ವೀಕರಿಸಲು ಅವಕಾಶವಿರುವುದಿಲ್ಲ.

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

ಗೆ.

1. ರಾಜ್ಯದ ಎಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ, ಪದವಿ ಪೂರ್ವ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಿಗೆ. ( ಸುತ್ತೋಲೆಯಂತೆ ಕ್ರಮವಹಿಸುವುದು ಹಾಗೂ ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವುದು)